144ನೇ ಅಧಿವೇಶನ ದಿ: 21/9/21 ರಂದು ಸದನದಲ್ಲಿ ಚರ್ಚೆಯಾಗಿದೆ.

ನಿ-72
ಕ್ರ-172

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನಸೆಳೆಯುವ ಸೂಚನೆಗೆ ಉತ್ತರ.

**ಸೂಚನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವತಿಯಿಂದ ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದು ಹಿಂದುಳಿದ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕೆ.ಆರ್.ಐ.ಡಿ.ಎಲ್. ನ ಕೆಲವು ಅಧಿಕಾರಿಗಳು ಮತ್ತು ಖಾಸಗಿ ಗುತ್ತಿಗೆದಾರರು ಶಾಮೀಲಾಗಿ ಖಾಸಗಿ ಕೃಷಿ ಭೂಮಿಯಲ್ಲಿ ಬಸವೇಶ್ವರ ಸಮುದಾಯ ಭವನವನ್ನು ನಿರ್ಮಿಸುತ್ತಿರುವುದು ಹಾಗೂ ಸ್ವಂತ ಫ್ಯಾಕ್ಟರಿಗಳಲ್ಲಿ ಹೈಮಾಸ್ಕ್ ಲೈಟ್ ಮತ್ತು ತಡೆಗೋಡೆ ನಿರ್ಮಾಣದ ಅನುದಾನದಲ್ಲಿ ಸ್ವಂತ ಮನೆಗೆ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿರುವ ವಿಷಯವನ್ನು ದಿನಾಂಕ 22.09.2021 ರಂದು ನಿಯಮ 72 ರ ಅಡಿಯಲ್ಲಿ ಸದನದಲ್ಲಿ ಚರ್ಚಿಸಲು ಅನುಮತಿಯನ್ನು ಕೋರುತ್ತೇನೆ.

**ಉತ್ತರ.**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2006-07ನೇ ಸಾಲಿನಿಂದ ಜಾರಿಗೆ ತರಲಾದ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮಗಳ ಅಭಿವೃದ್ಧಿಗೆ ಗರಿಷ್ಠ ರೂ.1.00 ಕೋಟಿಯಂತೆ ನಿಗಧಿಪಡಿಸಿ ಯೋಜನೆಯಡಿ ಒಟ್ಟು 5613 ಗ್ರಾಮಗಳನ್ನು ಅಭಿವೃದ್ಧಿಪಡಿಸಲು ರೂ.3434.94 ಕೋಟಿಗಳನ್ನು ನಿಗಧಿಪಡಿಸಿ ಇದುವರೆಗೆ ರೂ.3267.00 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಸುವರ್ಣ ಗ್ರಾಮೋದಯ ಯೋಜನೆಯನ್ನು ಒಟ್ಟು 5 ಹಂತಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಹಂತ-5ರಲ್ಲಿ ಬೆಂಗಳೂರು ನಗರ ಜಿಲ್ಲೆ, ಕೆಂಗೇರಿ ಹೋಬಳಿ, ಕೆ-ಗೊಲ್ಲಹಳ್ಳಿ ಗ್ರಾಮ ಪಂಚಾಯತಿಯ ಬಸವೇಶ್ವರನಗರದ ಸಮುದಾಯ ಭವನ ಅಭಿವೃದ್ಧಿ ಕಾಮಗಾರಿಗೆ ಮಾನ್ಯ ಶಾಸಕರು ಕೋರಿದಂತೆ ಹಂತ ಹಂತವಾಗಿ ಇದುವರೆಗೆ ರೂ.4.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಕೆ-ಗೊಲ್ಲಹಳ್ಳಿ ಗ್ರಾಮ ಪಂಚಾಯತಿಗೆ ಶ್ರೀ ಶಿರಡಿ ಸಾಯಿಬಾಬಾ ಸೇವಾಸಮಿತಿ ಯಿಂದ ಸಮುದಾಯ ಭವನ ನಿರ್ಮಾಣಕ್ಕೆ 20400 ಚ.ಅ ವಿಸ್ತೀರ್ಣ ಜಾಗವನ್ನು ಅಫಿಡೆವಿಟ್ ಮೂಲಕ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಿರುತ್ತಾರೆ. ನಂತರ, ದಿನಾಂಕ:19.08.2021ರಂದು ಗ್ರಾಮ ಪಂಚಾಯತಿ ಹೆಸರಿಗೆ ನೊಂದಣಿಯಾಗಿರುತ್ತದೆ.

ಕಾಮಗಾರಿಯು ಪ್ರಗತಿಯ ಹಂತದಲ್ಲಿದ್ದು, ಇದುವರೆಗೂ ರೂ.354.00 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸಿ ಸಮುದಾಯ ಭವನ ಕಟ್ಟಡವನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗುವುದೆಂದು ಅನುಷ್ಠಾನ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್ ರವರು ತಿಳಿಸಿರುತ್ತಾರೆ.

ಈ ಸಮುದಾಯ ಭವನ ನಿರ್ಮಾಣದಿಂದ ಸುತ್ತಮುತ್ತಲಿನ ಸುಮಾರು 60 ಗ್ರಾಮಗಳ ಸಾರ್ವಜನಿಕರು ಬಳಸಿಕೊಳ್ಳಬಹುದಾಗಿದೆ. ಪ್ರಸ್ತುತ ಈ ಸಮುದಾಯ ಭವನ ಗ್ರಾಮ ಪಂಚಾಯತಿ ಸ್ವತ್ತಾಗಿದ್ದು, ಖಾಸಗಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತಿಳಿಸಿದೆ.

ಕೆ.ಎಸ್.ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು